ಉ) ನಾಲೆಯಲ್ಲಿ ಬರುವ ಗೇಟುಗಳಲ್ಲಿ ಸಾಮಾನ್ಯ ನೀರು ಸೋರುವಿಕೆ ಕಂಡು ಬಂದಲ್ಲಿ ಪಾರ್ಷಿಕ ನಿರ್ವಹಣೆ ವೆಚ್ಚದಲ್ಲಿ ದುರಸ್ತಿ ಮಾಡಿ ನೀರನ್ನು ಹರಿಸಲಾಗುತ್ತಿದೆ.

ಊ) ಈ ಯೋಜನೆಗೆ ಸಂಬಂಧಿಸಿದಂತೆ ರಂಗಸಮುದ್ರ ಗ್ರಾಮದಲ್ಲಿ ನಿರ್ಮಿಸಲಾಗಿರುವ ಕಛೇರಿ ಮತ್ತು ವಸತಿ ಕಟ್ಟಡಗಳನ್ನು ಇಲಾಖೆಯ ನಿರ್ವಹಣಾ ಸಿಬ್ಬಂದಿಗಳ ವಸತಿ ಸೌಕರ್ಯಗಳಿದ್ದು ಕೆಲವು ಕಟ್ಟಡಗಳನ್ನು ಅನ್ಯ ಇಲಾಖೆ ಸಿಬ್ಬಂದಿಯ ಬೇಡಿಕೆ ಮೇರೆಗೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದೆ. ಖಾಲಿ ಉಳಿದಿರುವ ಕಟ್ಟಡಗಳನ್ನು ಬಾಡಿಗೆ ಆಧಾರದ ಮೇಲೆ ಅರಣ್ಯ ಇಲಾಖೆ ಹಗೂ ಬೇರೆ ಇಲಾಖೆಗಳಿಗೆ ಕೊಡುವ ಬಗ್ಗೆ ವ್ಯವಹರಿಸಲಾಗುತ್ತಿದೆ.

ಋ) ಈ ಯೋಜನೆಯ ಮುಳುಗಡೆ ಪ್ರದೇಶಕ್ಕೆ ಸಂಬಂಧಿಸಿದಂತೆ ಯಾವುದೇ ಗ್ರಾಮ ಅಥವಾ ಮನೆಗಳು ಮುಳುಗಡೆ ಆಗಿರದ ಕಾರಣ, ಸಂತ್ರಸ್ತ ಕುಟುಂಬದವರಿಗೆ ಪರಿಹಾರ ನೀಡುವ ಪ್ರಶ್ನೆ ಉದ್ಭವಿಸಿರುವುದಿಲ್ಲ. ಈ ಯೋಜನೆಗೆ ಇದುವರೆವಿಗೆ ಆಗಿರುವ ಖರ್ಚು ರೂ. 17.70 ಕೋಟಿಗಳು.

ಹಾರಂಗಿ ಯೋಜನೆಯ ಉದ್ಯಾನವನದ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸುವ ಬಗ್ಗೆ

4193 (4834) : ಶ್ರೀ ಅಪ್ಪಚ್ಚು ರಂಜನ್ ಎಂ.ಪಿ (ಸೋಮವಾರಪೇಟೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹಾರಂಗಿ ಯೋಜನೆಯ ಗಾರ್ಡ್‌ನ್ (ಉದ್ಯಾನವನದ) ನಿರ್ವಹಣೆಯನ್ನು ಸರ್ಕಾರವೇ ನೋಡಿಕೊಳ್ಳುವುದೇ ಅಥವಾ ಖಾಸಗೀಯವರಿಗೆ ನೀಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ; ವಿವರ ನೀಡುವುದು;

ಆ) ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಈ ಉದ್ಯಾನವನದ ನಿರ್ವಹಣೆಯನ್ನು ಖಾಸಗೀಯವರಿಗೆ ವಹಿಸುವ ಬಗ್ಗೆ ಭರವಸೆ ನೀಡಿದ್ದರೇ;

ಇ) ಹಾಗಿದ್ದಲ್ಲಿ ಈ ಪ್ರಸ್ತಾಪ ಯಾವ ಹಂತದಲ್ಲಿದೆ;

ಈ) ಸರ್ಕಾರವೇ ನಿರ್ವಹಣೆ ಮಾಡಿ ನೋಡಿಕೊಳ್ಳಲು ಇರುವ ತೊಂದರೆಗಳೇನು;

ಉ) ಖಾಸಗಿಯವರಿಗೆ ಕೊಡಲು ಮುಂದಾಗಿದ್ದಲ್ಲಿ ಯಾರಿಗೆ ವಹಿಸಲಾಗಿದೆ; ಎಷ್ಟು ಮೊತ್ತಕ್ಕೆ ನೀಡಲು ಉದ್ದೇಶಿಸಲಾಗಿದೆ; ವಿವರಗಳೊಂದಿಗೆ ಮಾಹಿತಿ ನೀಡುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹಾರಂಗಿ ಅಣೆಕಟ್ಟೆಯ ಕೆಳಭಾಗದಲ್ಲಿ ಬರುವ ಬೃಂದಾವನವನ್ನು ಕಾವೇರಿ ನೀರಾವರಿ ನಿಗಮದ ಮೂಲಕ ನಿರ್ವಹಿಸಲಾಗುತ್ತಿದೆ.

ಆ) ಉದ್ಯಾನವನ್ನು ಅಭಿವೃದ್ಧಿಗೊಳಿಸಲು ಯೋಜಿಸಲಾಗಿದ್ದು ಅಭಿವೃದ್ಧಿಗೊಳಿಸಿದ ನಂತರ ನಿರ್ಣಯಿಸಲಾಗುವುದು.

ಇ) ಪ್ರಸ್ತಾವನೆಯ ಹಂತದಲ್ಲಿಸೆ

ಈ) ಸದ್ಯಕ್ಕೆ ಉದ್ಭವಿಸುವುದಿಲ್ಲ.

ಉ) ಪ್ರಸ್ತಾವನೆಯ ಹಂತದಲ್ಲಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಬೀದರ್‌ನಲ್ಲಿ ಶಿಶು ಮಾರಾಟ ಪ್ರಕರಣದ ತನಿಖಾ ವರದಿಯ ಬಗ್ಗೆ

4195 (4945) : ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?